**National**
**Kannada**
**07.12.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**ಮುಖ್ಯಾಂಶಗಳು**

1. ಇಂದು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ; ಸ್ವಯಂಪ್ರೇರಣೆಯಿಂದ ಸಶಸ್ತ್ರ ಪಡೆಗಳ ನಿಧಿಗೆ ದೇಣಿಗೆ ನೀಡುವಂತೆ ಜನತೆಗೆ ಉಪರಾಷ್ಟ್ರಪತಿ, ಪ್ರಧಾನಿ ಮನವಿ
2. ಗೋವಾದ ಅರ್ಪೋರಾದ ನೈಟ್‌ಕ್ಲಬ್‌ನಲ್ಲಿ ಬೆಂಕಿ ಅವಘಡ; ೨೩ ಮಂದಿ ಸಾವು; ಪ್ರಧಾನಿ ಪರಿಹಾರ ಘೋಷಣೆ
3. ಕೃತಕ ಬುದ್ಧಿಮತ್ತೆ ಪ್ರತಿಯೊಂದು ಕ್ಷೇತ್ರಕ್ಕೂ ಅವಿಭಾಜ್ಯ ಅಂಗ- ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅಭಿಮತ
4. ಫಿಫಾ ಫುಟ್ಬಾಲ್ ವಿಶ್ವಕಪ್ ೨೦೨೬; ವೇಳಾಪಟ್ಟಿ ಬಿಡುಗಡೆ ಮಾಡಿದ ಅಂತರರಾಷ್ಟ್ರೀಯ ಅಸೋಸಿಯೇಷನ್ ಫುಟ್ಬಾಲ್ ಒಕ್ಕೂಟ

<><><><>

ಪ್ರಧಾನಿ ನರೇಂದ್ರ ಮೋದಿ ಅವರ ಪರೀಕ್ಷಾ ಪೇ ಚರ್ಚೆಯ ೯ನೇ ಆವೃತ್ತಿಗೆ ಮುಂಚಿತವಾಗಿ ಮೈಗವ್ ಪೋರ್ಟಲ್‌ನಲ್ಲಿ ದೇಶಾದ್ಯಂತ ಆನ್‌ಲೈನ್ ಸ್ಪರ್ಧೆ ನಡೆಯುತ್ತಿದೆ. ಬಹು ಆಯ್ಕೆ ಪ್ರಶ್ನೆ ಆಧಾರಿತ ಸ್ಪರ್ಧೆಯು ಬರುವ ಜನವರಿ ೧೧ರವರೆಗೆ ತೆರೆದಿರುತ್ತದೆ. ೬ ರಿಂದ ೧೨ನೇ ತರಗತಿಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಭಾಗವಹಿಸಿದ ಎಲ್ಲರಿಗೂ ಭಾಗವಹಿಸುವಿಕೆಯ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಪರೀಕ್ಷಾ ಪೇ ಚರ್ಚಾ ಜನವರಿ ೨೦೨೬ ರಲ್ಲಿ ನಡೆಯಲಿದ್ದು, ಭಾರತ ಮತ್ತು ವಿದೇಶಗಳಿಂದ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಪ್ರಧಾನಮಂತ್ರಿಯವರೊಂದಿಗೆ ಪರೀಕ್ಷೆಯ ಒತ್ತಡ ಕುರಿತು ಚರ್ಚೆ ನಡೆಸಿ, ಪರೀಕ್ಷೆಗಳನ್ನು ಜೀವನದ ಅವಿಭಾಜ್ಯ ಅಂಗವಾಗಿ ಕಾಣಲು ತೊಡಗಿಸಿಕೊಳ್ಳುತ್ತಾರೆ. ೨೦೨೫ರಲ್ಲಿ ಪರೀಕ್ಷಾ ಪೇ ಚರ್ಚಾ, ಗಿನ್ನಿಸ್ ವಿಶ್ವ ದಾಖಲೆಯನ್ನು ಸ್ಥಾಪಿಸಿತು. ೨೪೫ಕ್ಕೂ ಹೆಚ್ಚು ದೇಶಗಳ ವಿದ್ಯಾರ್ಥಿಗಳು, ೧೫೩ ದೇಶಗಳ ಶಿಕ್ಷಕರು ಮತ್ತು ೧೪೯ ದೇಶಗಳ ಪೋಷಕರ ಭಾಗವಹಿಸುವಿಕೆಯನ್ನು ಸೆಳೆಯಿತು. ೨೦೧೮ ರಲ್ಲಿ ಮೊದಲ ಆವೃತ್ತಿಯಲ್ಲಿ ಕೇವಲ ೨೨ ಸಾವಿರ ಸ್ಪರ್ಧಿಗಳಿಂದ ಶುರುವಾಗಿ ೨೦೨೫ರ ೮ನೇ ಆವೃತ್ತಿಯಲ್ಲಿ ೩.೫೬ ಕೋಟಿಗೆ ನೋಂದಣಿ ಏರಿಕೆಯಾಗಿದೆ. ಇದರೊಂದಿಗೆ, ಪರೀಕ್ಷಾ ಪೇ ಚರ್ಚಾ ೨೦೨೫ಕ್ಕೆ ಸಂಬಂಧಿಸಿದ ರಾಷ್ಟ್ರವ್ಯಾಪಿ ಜನ ಆಂದೋಲನ ಚಟುವಟಿಕೆಗಳಲ್ಲಿ ೧.೫೫ ಕೋಟಿ ಜನರು ಭಾಗವಹಿಸಿದ್ದರು. ಒಟ್ಟು ಭಾಗವಹಿಸುವಿಕೆಯ ಸಂಖ್ಯೆ ೫ ಕೋಟಿಗೆ ಏರಿದೆ.

<><><><>

ಇಂದು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ. ಕಳೆದ ೧೯೪೯ರ ಡಿಸೆಂಬರ್ ೭ ರಿಂದ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಆಚರಿಸಲಾಗುತ್ತಿದ್ದು, ಭಾರತದ ಗೌರವವನ್ನು ಕಾಪಾಡಲು, ನಮ್ಮ ಗಡಿಗಳಲ್ಲಿ, ಶೌರ್ಯದಿಂದ ಹೋರಾಡಿದ, ಮತ್ತು ಹೋರಾಡುತ್ತಿರುವ, ವೀರ ಯೋಧರನ್ನು ಗೌರವಿಸಲಾಗುತ್ತದೆ. ಸಶಸ್ತ್ರ ಪಡೆಗಳ, ವೀರ ಯೋಧರ, ಶೌರ್ಯ, ಸಾಹಸ, ತ್ಯಾಗ ಮತ್ತು ಅವರ ಬಲಿದಾನಗಳನ್ನು, ಸಮಸ್ತ ನಾಡಿಗೆ ತಿಳಿಸಿ, ಮಾತೃಭೂಮಿಯ ಸೇವೆಯಲ್ಲಿ, ತಮ್ಮ ಪ್ರಾಣವನ್ನೇ ಅರ್ಪಿಸುವ, ಧೀರ ಯೋಧರಿಗೆ, ನಾಡಿನಾದ್ಯಂತ ಇಂದು, ಗೌರವ ಸಮರ್ಪಿಸಲಾಗುತ್ತಿದೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಸಶಸ್ತ್ರ ಪಡೆಗಳಿಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಕೃತಜ್ಞತೆ ಸಲ್ಲಿಸಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಸಶಸ್ತ್ರ ಪಡೆಗಳ ಧ್ವಜ ದಿನದ ನಿಧಿಗೆ ತಮ್ಮ ಪೂರ್ಣ ಒಂದು ತಿಂಗಳ ಸಂಬಳವನ್ನು ದೇಣಿಗೆ ನೀಡಿದ್ದಾರೆ. ಎಲ್ಲಾ ನಾಗರಿಕರು ಸಶಸ್ತ್ರ ಪಡೆಗಳ ಧ್ವಜ ದಿನದ ನಿಧಿಗೆ ಸ್ವಯಂಪ್ರೇರಣೆಯಿಂದ ದೇಣಿಗೆ ನೀಡುವ ಮೂಲಕ ರಾಷ್ಟ್ರದ ಸೈನಿಕರು, ಹುತಾತ್ಮರು ಮತ್ತು ಅವರ ಕುಟುಂಬಗಳಿಗೆ ಸಾಮೂಹಿಕವಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುವಂತೆ ಉಪರಾಷ್ಟ್ರಪತಿಯವರು ಮನವಿ ಮಾಡಿದ್ದಾರೆ. ದೇಶವನ್ನು ಅಚಲ ಧೈರ್ಯದಿಂದ ರಕ್ಷಿಸುವ ಧೈರ್ಯಶಾಲಿ ಪುರುಷರು ಮತ್ತು ಮಹಿಳೆಯರಿಗೆ ದೇಶವು ಕೃತಜ್ಞತೆ ಸಲ್ಲಿಸುತ್ತದೆ. ಸಶಸ್ತ್ರ ಪಡೆಗಳ ಶಿಸ್ತು, ಸಂಕಲ್ಪ ಹಾಗೂ ಅದಮ್ಯ ಮನೋಭಾವವು ಜನರನ್ನು ಸಂರಕ್ಷಿಸುತ್ತದೆ ಮತ್ತು ರಾಷ್ಟ್ರವನ್ನು ಬಲಪಡಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅವರ ಬದ್ಧತೆಯು ಕರ್ತವ್ಯ, ಶಿಸ್ತು ಮತ್ತು ಭಕ್ತಿಯ ಪ್ರಬಲ ಉದಾಹರಣೆಯಾಗಿದೆ ಎಂದು ಅವರು ಹೇಳಿದ್ದಾರೆ. ಸಶಸ್ತ್ರ ಪಡೆಗಳ ಧ್ವಜ ದಿನದ ನಿಧಿಗೆ ಕೊಡುಗೆ ನೀಡಿ ಪ್ರೋತ್ಸಾಹಿಸಬೇಕೆಂದು ಪ್ರಧಾನಿಯವರು ಜನತೆಗೆ ಮನವಿ ಮಾಡಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ನಮ್ಮ ಸಶಸ್ತ್ರ ಪಡೆಗಳ ಶೌರ್ಯ ಮತ್ತು ತ್ಯಾಗಗಳಿಗೆ ವಂದಿಸುವುದಾಗಿ ತಿಳಿಸಿದ್ದಾರೆ. ಅವರ ಧೈರ್ಯವು ನಮ್ಮ ರಾಷ್ಟ್ರವನ್ನು ರಕ್ಷಿಸುತ್ತದೆ ಮತ್ತು ಅವರ ನಿಸ್ವಾರ್ಥ ಸೇವೆಯು ಸ್ಮರಣಾರ್ಹ. ಸಶಸ್ತ್ರ ಪಡೆಗಳ ಧ್ವಜ ದಿನದ ನಿಧಿಗೆ ಉದಾರವಾಗಿ ಕೊಡುಗೆ ನೀಡಬೇಕೆಂದು ಎಂದು ಕೋರಿದ್ದಾರೆ. ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಭಾರತೀಯ ಸಶಸ್ತ್ರ ಪಡೆಗಳ ಎಲ್ಲಾ ಶ್ರೇಣಿಗಳು, ಮಾಜಿ ಸೈನಿಕರು ಮತ್ತು ಮಹಿಳಾ ಯೋಧರಿಗೆ ಶುಭಾಶಯ ಕೋರಿದ್ದಾರೆ. ಯೋಧರ ದೃಢನಿಶ್ಚಯದ ಅದಮ್ಯ ಸೇವಾ ಮನೋಭಾವ ಮತ್ತು ಭಾರತದ ರಕ್ಷಣಾ ಸನ್ನದ್ಧತೆ ಹಾಗೂ ರಾಷ್ಟ್ರೀಯ ಭದ್ರತೆಗೆ ನಿರಂತರ ಕೊಡುಗೆಯನ್ನು ಶ್ಲಾಘಿಸಿದ್ದಾರೆ. ಎಲ್ಲಾ ಗಡಿಗಳು ಮತ್ತು ಕ್ಷೇತ್ರಗಳಲ್ಲಿ ರಾಷ್ಟ್ರದ ಸಾರ್ವಭೌಮತ್ವವನ್ನು ಕಾಪಾಡಿದ ಸೈನಿಕರು, ನಾವಿಕರು ಮತ್ತು ವಾಯು ಯೋಧರ ಅಚಲ ಬದ್ಧತೆ, ಅಸಾಧಾರಣ ಶೌರ್ಯ ಮತ್ತು ಸರ್ವೋಚ್ಚ ತ್ಯಾಗಗಳನ್ನು ಅವರು ಗೌರವಿಸಿದ್ದಾರೆ.

<><><><>

ಉತ್ತರ ಗೋವಾದ ಅರ್ಪೋರಾದ ನೈಟ್‌ಕ್ಲಬ್‌ನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ೨೫ ಮಂದಿ ಮೃತಪಟ್ಟಿದ್ದಾರೆ.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ ನಂತರ ಮೃತರಲ್ಲಿ ಹೆಚ್ಚಿನವರು ಕ್ಲಬ್‌ನ ಕೆಲಸಗಾರರು ಮತ್ತು ಪ್ರವಾಸಿಗರು ಎಂದು ಮಾಹಿತಿ ನೀಡಿದ್ದಾರೆ. ಈ ದುರಂತಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮದಲ್ಲಿ ಸಂತಾಪ ಸೂಚಿಸದ್ದಾರೆ. ಈ ಕಷ್ಟದ ಸಮಯದಲ್ಲಿ ಮೃತರ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿ ದೊರಕಲಿ ಎಂದು ರಾಷ್ಟ್ರಪತಿಗಳು ಆಶಿಸಿದ್ದಾರೆ. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣ, ಈ ದುರಂತದಿಂದ ತೀವ್ರ ದುಃಖಿತರಾಗಿರುವುದಾಗಿ ತಿಳಿಸಿದ್ದಾರೆ. ದುಃಖದ ಈ ಕ್ಷಣದಲ್ಲಿ ತಮ್ಮ ಪ್ರಾರ್ಥನೆ ಮೃತ ಕುಟುಂಬಗಳೊಂದಿಗೆ ಇವೆ ಎಂದು ಹೇಳಿದ್ದಾರೆ. ಗಾಯಗೊಂಡವರೆಲ್ಲರೂ ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಅವರು ಹಾರೈಸಿದ್ದಾರೆ. ಈ ನಡುವೆ ಪ್ರಧಾನಿ ನರೇಂದ್ರ ಮೋದಿ, ಗೋವಾ ಮುಖ್ಯಮಂತ್ರಿ ಡಾ.ಪ್ರಮೋದ್ ಸಾವಂತ್ ಅವರೊಂದಿಗೆ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದಿದ್ದು, ಗೋವಾ ಸರ್ಕಾರವು ಸಂತ್ರಸ್ತರಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತಿದೆ ಎಂದು ತಿಳಿಸಿದ್ದಾರೆ. ಪ್ರಧಾನಿಯವರು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಕ್ಕೆ ೨ ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಿಸಿದ್ದಾರೆ. ಗಾಯಾಳುಗಳಿಗೆ ೫೦ ಸಾವಿರ ರೂಪಾಯಿಗಳನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ.

<><><><>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಇಂದು ಹರಿಯಾಣದ ಗುರುಗ್ರಾಮದಲ್ಲಿ ಬ್ರಹ್ಮಕುಮಾರಿಯರ ಓಂ ಶಾಂತಿ ಆಶ್ರಯಧಾಮ ಕೇಂದ್ರದ ಬೆಳ್ಳಿ ಮಹೋತ್ಸವ ಆಚರಣೆಯ ಔಪಚಾರಿಕ ಆರಂಭವನ್ನು ಗುರುತಿಸುವ ರಜತ್ ರಶ್ಮಿಯಾನ್ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಉಪರಾಷ್ಟ್ರಪತಿ, ಬ್ರಹ್ಮ ಕುಮಾರಿಯರು ಧ್ಯಾನದ ಶಕ್ತಿಯ ಮೂಲಕ ಮನಸ್ಸು, ವಿಶ್ವ ಮತ್ತು ಸ್ವಯಂ ಬಗ್ಗೆ ಆಳವಾದ ಸತ್ಯಗಳನ್ನು ಬಹಿರಂಗಪಡಿಸಿದ್ದಾರೆ. ಅವರ ನಿರಂತರ ಪ್ರಯತ್ನಗಳು ಭಾರತ ಮತ್ತು ಪ್ರಪಂಚದಾದ್ಯಂತದ ಅಸಂಖ್ಯಾತ ಅನ್ವೇಷಕರಿಗೆ ಶಾಂತಿ, ಶುದ್ಧತೆ ಮತ್ತು ಆಧ್ಯಾತ್ಮಿಕ ಜಾಗೃತಿಯನ್ನು ತಂದಿವೆ ಎಂದು ಅವರು ಹೇಳಿದರು.

<><><><>

ಭಾರತೀಯ ಗಗನಯಾತ್ರಿ ಮತ್ತು ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಇಂದು ಕೃತಕ ಬುದ್ಧಿಮತ್ತೆ ಪ್ರಗತಿಯ ಪ್ರತಿಯೊಂದು ಕ್ಷೇತ್ರಕ್ಕೂ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ 'ಭಾರತದ ಮೊದಲ ನಗರ ಕೇಂದ್ರಿತ ಎಐ ಇನ್ನೋವೇಶನ್

ಎಂಜಿನ್' ದೆಹಲಿ ಕೃತಕ ಬುದ್ಧಿಮತ್ತೆ ಗ್ರೈಂಡ್ ಅನ್ನುದ್ದೇಶಿಸಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ ಪ್ರತಿಯೊಂದು ಹಂತದಲ್ಲೂ ಪ್ರಗತಿ ಸಾಧಿಸಿದ್ದು, ಇದು ವಿಷಯಗಳನ್ನು ಗ್ರಹಿಸುವ ಒಂದು ಸಾಧನವಾಗಿದೆ ಮತ್ತು ವ್ಯಾಪಕವಾಗಿ ಬಳಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ವಿಕಸಿತ ಭಾರತ ೨೦೪೭ ರ ಕನಸನ್ನು ನನಸಾಗಿಸಲು ಇದು ಪ್ರಮುಖ ಹೆಜ್ಜೆ ಎಂದು ಅವರು ಹೇಳಿದ್ದಾರೆ.

ಧ್ವನಿ: ಶುಭಾಂಶು ಶುಕ್ಲಾ

<><><><>

ಚುನಾವಣಾ ಆಯೋಗವು ನಡೆಸುತ್ತಿರುವ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯವು ಉತ್ತರ ಪ್ರದೇಶದಲ್ಲಿ ವೇಗವಾಗಿ ಪ್ರಗತಿಯಲ್ಲಿದೆ. ರಾಜ್ಯದ ೯೧ ಸಾವಿರಕ್ಕೂ ಹೆಚ್ಚು ಮತಗಟ್ಟೆಗಳಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ೧೦೦ ಪ್ರತಿಶತ ಕೆಲಸ ಪೂರ್ಣಗೊಂಡಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ನವದೀಪ್ ರಿನ್ವಾ ಹೇಳಿದ್ದಾರೆ. ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಕೆಲಸವನ್ನು ಪೂರ್ಣಗೊಳಿಸಲು ಬೂತ್‌ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣವಾಗಿ ಸಹಕರಿಸುವಂತೆ ಅವರು ನಿರ್ದೇಶನ ನೀಡಿದ್ದಾರೆ. ವಿಶೇಷ ತೀವ್ರ ಪರಿಷ್ಕರಣೆ ಕಾರ್ಯಕ್ರಮದ ಪ್ರತಿಯೊಂದು ಹಂತವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಚುನಾವಣಾ ಆಯೋಗ ಹೊರಡಿಸಿದ ಮಾರ್ಗಸೂಚಿಗಳೊಂದಿಗೆ ನೂರರಷ್ಟು ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಈ ನಡುವೆ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಎರಡನೇ ಹಂತವು ಮಧ್ಯಪ್ರದೇಶದಲ್ಲಿಯೂ ವೇಗವಾಗಿ ಪ್ರಗತಿಯಲ್ಲಿದೆ.

<><><><>

ಯುನೈಟೆಡ್ ಸ್ಟೇಟ್ಸ್, ಕೆನಡಾ ಮತ್ತು ಮೆಕ್ಸಿಕೊದಲ್ಲಿ ನಡೆಯಲಿರುವ ೪೮ ತಂಡಗಳ ವಿಸ್ತೃತ ಪಂದ್ಯಾವಳಿಗಾಗಿ ಗುಂಪುಗಳನ್ನು ಅಂತಿಮಗೊಳಿಸಿದ ಒಂದು ದಿನದ ನಂತರ, ಅಂತರರಾಷ್ಟ್ರೀಯ ಅಸೋಸಿಯೇಷನ್ ಫುಟ್ಬಾಲ್ ಒಕ್ಕೂಟ, ಫಿಫಾ ೨೦೨೬ ರ ವಿಶ್ವಕಪ್‌ನ ಸಂಪೂರ್ಣ ಪಂದ್ಯ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ೧೦೪ ಪಂದ್ಯಗಳ ಪಂದ್ಯಾವಳಿ ಜೂನ್ ೧೧ ರಂದು ಮೆಕ್ಸಿಕೊ ನಗರದಲ್ಲಿ ಮೆಕ್ಸಿಕೊ ಮತ್ತು ದಕ್ಷಿಣ ಆಫ್ರಿಕಾ ನಡುವೆ ಪ್ರಾರಂಭವಾಗಲಿದೆ. ಹಾಲಿ ಚಾಂಪಿಯನ್ ಅರ್ಜೆಂಟೀನಾ ಜೂನ್ ೧೬ ರಂದು ಅಲ್ಜೀರಿಯಾ ವಿರುದ್ಧ ಆಟವಾಡಲಿದೆ. ಫೈನಲ್ ಜುಲೈ ೧೯ ರಂದು ನ್ಯೂಜೆರ್ಸಿಯ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಕೆನಡಾ ಮತ್ತು ಮೆಕ್ಸಿಕೊದಲ್ಲಿ ತಲಾ ೧೩ ಪಂದ್ಯಗಳೊಂದಿಗೆ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಒಟ್ಟು ೭೮ ಪಂದ್ಯಗಳನ್ನು ಆಯೋಜಿಸಲಾಗುವುದು.

<><><><>

ಭಾರತ ತಂಡವು, ಮೂರು ಹಾಕಿ ಪಂದ್ಯಗಳ ಸರಣಿಯ ದಕ್ಷಿಣ ಆಫ್ರಿಕಾ ಪ್ರವಾಸದ ಮೊದಲ ಪಂದ್ಯದಲ್ಲಿ ಕೇಪ್ ಟೌನ್ ನ ಸ್ಟೆಲೆನ್ ಬೋಷ್ ನಲ್ಲಿಂದು ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಸೆಣಸಲಿದೆ. ಈ ಪಂದ್ಯವು ಭಾರತೀಯ ಕಾಲಮಾನ ರಾತ್ರಿ ೮:೩೦ ಕ್ಕೆ ಆರಂಭವಾಗಲಿದೆ. ಪಶ್ಚಿಮ ಕೇಪ್ ನಲ್ಲಿ ಇಂದು ಹಾಗೂ ಇದೇ ೯ ಮತ್ತು ೧೦ ರಂದು ಪಂದ್ಯಗಳು ನಡೆಯಲಿವೆ.ಭಾರತ ಪ್ರಸ್ತುತ ವಿಶ್ವ ಶ್ರೇಯಾಂಕದಲ್ಲಿ ೭ ನೇ ಸ್ಥಾನದಲ್ಲಿದ್ದರೆ, ದಕ್ಷಿಣ ಆಫ್ರಿಕಾ ೧೨ ನೇ ಸ್ಥಾನದಲ್ಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>